

ಬಿ.ಎನ್. ಮಲ್ಲೇಶ್
ಕಲೆ: ವೆಂಕಟ್ರಮಣ ಭಟ್



# ದೇವರ ಕೋಲು

ಅಲ್ಲೆಲ್ಲೋ ಬೆಟ್ಟದ ಬುಡದಲ್ಲಿ ತಣ್ಣಗೆ
ನಿದ್ರಿಸುವ ಮಗುವಂತೆ ಮಲಗಿದ್ದ
ನಿನ್ನನ್ನೆತ್ತಿಕೊಂಡು ಎದೆಗೆ ಅಪ್ಪಿಕೊಂಡು
ಜೋಪಾನವಾಗಿ
ಹೊತ್ತು ತಂದವರು ನಾವು

ಕಲ್ಲು ಎನಿಸಲಿಲ್ಲ ನೀನಮಗೆ
ನಿನ್ನ ಎದೆ ಬಡಿತಕ್ಕೆ ಕಿವಿಯಾದವರು
ನಿನ್ನ ಮೋರೆ ಸವರಿ, ಎದೆ ಪದಕ
ಭುಜಕೀರ್ತಿ, ಕಿರೀಟ ಇಟ್ಟು
ಎಲ್ಲೋ ಒಂದು ಕಡೆ ನಿನ್ನ ಕಾಲ ಕಿರುಬೆರಳು
ಸೊಟ್ಟಗಾಯಿತೆಂದು ಮತ್ತೆ
ತಿದ್ದಿ ತೀಡಿ ಎತ್ತಿ ನಿಲ್ಲಿಸಿದವರು

ಕಣ್ಣುಗಳಲ್ಲಿ ಕರುಣೆ, ತುಟಿಗಳಲ್ಲಿ ನಗುವಿಟ್ಟು
ನಿನ್ನ ಪಾದಕಮಲಗಳ ಮೃದುವಾಗಿ ಕೆತ್ತಿದವರು
ನಾಲ್ಕು ಕೈಗಳಿಗೆ ನಾಲ್ಕು ಆಯುಧ ಕೊಟ್ಟು
ದೇವರಾದೆ ನೀನೆಂದು ಭಕ್ತಿ ಮೆರೆದವರು

ಕಲ್ಲು ಇಟ್ಟಿಗೆಗಳ ತಂದು
ನಿನಗೊಂದು ಗುಡಿ ಕಟ್ಟಿ
ಗುಡಿಗೊಂದು ಗಂಟೆ ಕಟ್ಟಿ
ಹೊರಗೆ ದೀಪಸ್ತಂಭವ ನಿಲ್ಲಿಸಿದವರು
ಗುಡಿಯ ಒಳಹೊಕ್ಕ ಮೇಲೆ ನೀನು
ಹೊರಗೆ ದೂರವೇ ನಿಂತು ಸಂಭ್ರಮಿಸಿದವರು

ದೇವರಾದ ಮೇಲೆ ಪ್ರಭುವೆ
ನಿನಗೆ ಎಚ್ಚರವಾಯಿತೆ?
ನಿನಗೊಂದು ಕೋಲು, ಊರುಗೋಲು ಬೇಕಾಯಿತೆ?
ನಿನ್ನ 'ದೇವರ ಕೋಲ' ಮುಟ್ಟಿದ ನೆಪಕ್ಕೆ
ದೇವರಂಥ ಮಗುವ ದಂಡಿಸಬಹುದೆ ಹೇಳು
ಎಲ್ಲರಲ್ಲೂ ಇರುವೆಯಾದರೆ ನೀನು
ಹಾಗೆ ದಂಡಿಸಿದವರ ಎದೆಯಲ್ಲೂ
ಇದ್ದಿರಬೇಕಲ್ಲವೆ?
ವ್ಯಥೆಯೆಂದರೆ ಪ್ರಭುವೆ
ಕಲ್ಲು ದೇವರಾದಂತೆ
ಕೋಲು ದೇವರಾಗಲಿಲ್ಲ ಕೊನೆಗೂ...